ಎಂದು ಒಪ್ಪಿಕೊಳ್ಳುವುದಾದರೆ, ಹಲವಾರು ಕಾರಣಗಳಿಗೆ ಅದು ಒಂದು ರೀತಿ ನಡೆದಿರಂತ್ತದೆ. Suppose it is a perversed judgement; suppose it is an order which is not eccording t law. ಅದನ್ನು ಹೈಕೋರ್ಟಿನವರು ಪ್ರಶ್ನೆ ಮಾಡಬಾರದು ಎಂದರೆ ಹೇಗೆ? ಹೈಕೋರ್ಟಿನವರು ತಡೆ ಅಜ್ಞೆ ಕೊಡುತ್ತಾರೆ, ನಮ್ಮ ಪ್ರಾಮಾಣಿಕತೆ ಒರೀ ಜನತಾ ಪ್ರತಿನಿಧಿಗಳ ಸ್ವತ್ತಲ್ಲ ನಮಗಿಂತ ಅಧಿಕವಾಗಿ ಪ್ರಾಮಾಣಿಕತೆ ಹೊಂದಿರತಕ್ಕವರು, ನ್ಯಾಯಾಲಯದಲ್ಲಿ ಕೆಲಸ ಮಾಡತಕ್ಕವರು ಇದ್ದಾರೆ.

(MR. *Deputy Speaker.—In the Chair*)

(ii) re.- re vitlising in Co-operation farming Section ***in the State.***

ಶ್ರೀ ಬಿ. ಎಂ. ಹೊರಕೇರಿ (ಗುಳೇದಗುಡ್).—ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ನನ್ನ ಈ ಖಾಸಗೀ ನಿರ್ಣಯವನ್ನು ಈ ಸದನದ ಮುಂದೆ ಮಂಡನೆ ಮಾಡುತ್ತಿದ್ದೇನೆ.

"ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಆರ್ಥಿಕವಾಗಿ ಸಂಭದ್ರವಾಗಿರುವ ಸಹಕಾರಿ ಬೇಸಾಯ ಸಂಘಗಳು ವಿಶೇಷ ತಾಂತ್ರಿಕ ಹಾಗೂ ಹಣ ಸಹಾಯದೊಂದಿಗೆ ವಿಶೇಷ ಕಾರ್ಯಕ್ರಮವನ್ನು ದೃಷ್ಟಿಯಲ್ಲಿಟ್ಟುಕೊಂಡು ವ್ಯವಸಾಯ ಕಾರ್ಯಾಚರಣೆಯನ್ನು ತೀವ್ರ ಹಾಗೂ ಸಮಗ್ರ ರೀತಿಯಲ್ಲಿ ಅಭಿವೃದ್ಧಿಗೊಳಿಸುವ ಸಲುವಾಗಿ ಸದರಿ ಸಂಘಗಳನ್ನು ಪುನಃಶ್ಚೇತನಗೊಳಿಸಬೇಕೆಂದು ಈ ಸಭೆಯವರು ಸರ್ಕಾರದವರಿಗೆ ಶಿಫಾರಸ್ ಮಾಡುತ್ತಾರೆ."

MR. DEPUTY SPEAKER —**Resolution moved.**

"This Assembly recommends to Government that the prospective existing co-operative farming societies in the State be revitalised with special programme of intensive and integrated developments in agricultural operations with special, technical and financial Assistance."

† ಶ್ರೀ ಬಿ. ಎಂ ಹೊರಕೇರಿ.—ಸ್ವಾಮಿ, ನಮ್ಮ ಭಾರತದೇಶದಲ್ಲಿ ಸಹಕಾರಿ ಬೇಸಾಯ ಪದ್ಧತಿ ಮೊದಲಿನಿಂದಲೂ ಅಂದರೆ ಪ್ರಾಚೀನತೆಯಿಂದ ಬಳಕೆಯಲ್ಲಿ ಬಂದದೆ. ಇದಕ್ಕೆ ಉದಾಹರಣೆ ಕೊಡಬೇಕೆಂದರೆ, ವ್ಯವಸಾಯಗಾರರು ತಮ್ಮಲ್ಲಿ ಸಾಕಷ್ಟು ಉಳುಮೆಮಾಡುವಂತಹ ಭೂಮಿ ಇಲ್ಲದಿದ್ದಾಗ, ತಮ್ಮಲ್ಲಿರುವಂತಹ ಎತ್ತುಗಳನ್ನು ಚಕ್ಕಡಿ ಹಾಗೂ ಇತರೇ ಉಪಕರಣಗಳನ್ನು ಬೇರೆಯವರಿಗೆ ಕೊಡುವುದು ಅಥವಾ ಬೇರೆಯವರಿಂದ ತಾವು ಪಡೆದುಕೊಳ್ಳುವುದು ಈ ರೀತಿಯಿಂದ ಪರಸ್ಪರ ತಿಳಿವಳಿಕೆ ಮೂಲಕ ರೈತರು ಹಿಂದಿನಿಂದ ಕೊಡುಕೊಳ್ಳಲು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಒಣ ಬೇಸಾಯ ಭೂಮಿ ಇದೆ. ಅಂತಹ ಕಡೆಗಳಲ್ಲಿ ಒಂದು ಜೊತೆ ಎತ್ತಿನಿಂದ ೩೦-೪೦ ಎಕರೆ ಭೂಮಿಯನ್ನು ಸಾಗುವಳಿ ಮಾಡಬಹುದು, ಆದರೆ ಒಬ್ಬ ರೈತನಲ್ಲಿ ಕೇವಲ ೧೦-೧೨ ಎಕರೆ ಜಮೀನು ಮಾತ್ರ ವಿದ್ದರೆ ಎರಡು ಎತ್ತುಗಳ ಅವಶ್ಯಕತೆಯಿರುವುದಿಲ್ಲ, ಆಗ ಒಂದು ಎತ್ತನ್ನು ಇಟ್ಟುಕೊಂಡು, ವ್ಯವಸಾಯ ಮಾಡತಕ್ಕಂಥ ಸಂದರ್ಭದಲ್ಲಿ ಬೇರೆ ಇಂತಹ ರೈತನಿಂದ ಇನ್ನೊಂದು ಎತ್ತನ್ನು ಪಡೆದುಕೊಂಡು ವ್ಯವಸಾಯ ಮಾಡುವುದು, ಹಾಗೆಯೇ ಕಾಳನ್ನು ಬಿತ್ತುವ ಕಾಲ ಬಂದಾಗ ಒಬ್ಬರಿಗೊಬ್ಬರು ಪರಸ್ಪರ ಸಹಾಯ ಮಾಡುವುದು ಮತ್ತು ಕೂಡಿಕೊಂಡು ಬೇಸಾಯ ಮಾಡುವಂತಹ ಪದ್ಧತಿ ಮೊದಲಿನಿಂದಲೂ ನಡೆದುಕೊಂಡು ಬಂದಿರುವಂತಹ ಪದ್ಧತಿಯಾಗಿದೆ ನಮ್ಮ ಭಾರತ ದೇಶದಲ್ಲಿ ಸಹಕಾರಿ ಬೇಸಾಯದ ಆಂದೋಳನ ಪ್ರಾರಂಭವಾದಾಗ, ದೇಶದ ಅಭಿವೃದ್ಧಿಗೆ ಇದು ಬಹಳ ಮಹತ್ವದ ಕಾರ್ಯಕ್ರಮವಾಗಿದೆ ಎಂದುಕೊಂಡು ಇದಕ್ಕೆ ಬಹಳ ಪ್ರೋತ್ಸಾಹ ಕೊಡಲಾಯಿತು, ಈ ಪದ್ಧತಿಯಿಂದ ಬಡ ಹಾಗೂ ಚಿಕ್ಕ ಹಿಡುವಳಿದಾರರಿಗೆ ಆರ್ಥಿಕವಾಗಿ ಅನುಕೂಲವಾಗುವುದಲ್ಲದೆ, ದೇಶದ ಅಭಿವೃದ್ಧಿಯೂ ಆಗುತ್ತದೆಂದು ಕೊಂಡು ಈ ಯೋಜನೆಗೆ ಎಲ್ಲರೂ ಬೆಂಬಲ ಕೊಟ್ಟರು. ಆದರಲ್ಲಿಯೂ ಮುಖ್ಯವಾಗಿ ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮ ಗಾಂಧೀಜಿಯವರು, ಗುರುದೇವ ಠಾಗೋರ ಅವರು, ಪಂಡಿತ ನೆಹರೂ ಅವರು ತುಂಬು ಹೃದಯದಿಂದ ಈ ಸಹಕಾರ ಬೇಸಾಯಕ್ಕೆ ಬೆಂಬಲ ಕೊಟ್ಟರು ಮತ್ತು ನಮ್ಮ ದೇಶದ

ಅರ್ಥಶಾಸ್ತ್ರಜ್ಞರಾದಂಥ ಡಾ. ಡಿ. ಆರ್. ಗಾಡ್ಗೀಲ್ ಅವರು ಸಹ ಈ ಕಾರ್ಯಕ್ರಮದ ಬಗ್ಗೆ ಒಳ್ಳೆಯ ಆಸ್ಥೆಯುಳ್ಳವರಾಗಿದ್ದರು. ನಮ್ಮ ರಾಜ್ಯದಲ್ಲಿಯೂ ಸಹ ಮಾನ್ಯ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಈ ಸಹಕಾರ ಬೇಸಾಯದ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ, ಇದಕ್ಕೆ ಮಾಡಲು ಪೀಠಿಕೆ ಹಾಕಿಕೊಡಲಾಯಿತು, ಆದರೆ ಈ ವಿಚಾರದಲ್ಲಿ ಸಮಾಧಾನಕರವಾದಂಥ ಪ್ರಗತಿಯಾಗದೆ ಕಾರಣ, ನಾವು ನಿರೀಕ್ಷಿಸಿದಂತಹ ಫಲಿತಾಂಶವನ್ನು ಅದು ಕೊಡಲಿಲ್ಲವೆಂದು ಹೇಳಬಹುದು, ನಮ್ಮ ಸರ್ಕಾರದವರು ೩ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಸಹಕಾರ ಬೇಸಾಯ ಯೋಜನೆಗೆ ಸಾಕಷ್ಟು ಹಣದ ನೆರವನ್ನು ಒದಗಿಸುವುದರ ಮೂಲಕ ಅದನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಪ್ರಯತ್ನ ಮಾಡಿದರು, ಆದರೆ ಈ ಒಂದು ಕಾರ್ಯಕ್ರಮ ಮಂದಗತಿಯಿಂದ ನಡೆದುಕೊಂಡು ಬಂತು, ಮುಂದೆ ಜನತೆ ಹಾಗೂ ಸರ್ಕಾರದಲ್ಲಿ ಈ ಸಹಕಾರಿ ಬೇಸಾಯದ ಬಗ್ಗೆ ಅನಾದರಣೆ ಮತ್ತು ಭಿನ್ನಾಭಿಪ್ರಾಯ ತಲೆದೋರಲಾರಂಭವಾಯಿತು. ಈ ಸಹಕಾರಿ ತತ್ವದಲ್ಲಿ ಒಂದು ಮಾತನ್ನು ಹೇಳುತ್ತಾರೆ. ಏನೆಂದರೆ, 'Every body' works is nobody' work ಎಂದು, ಹಾಗೆಯೇ ಅದನ್ನು ಕನ್ನಡದಲ್ಲಿ ಹೇಳುವುದಾದರೆ, ಆಳಿಗೆ ಆಳು ಕೂಡಿದರೆ ಮೋಳು ಆಗಲು ತಲೆಬಾನಿಬಂತೆ ಹೀಗೆ ಕೆಲಸದಲ್ಲಿ ಅನೈಕ್ಯತೆ ಬರುತ್ತದೆ. ಆದರೆ ತತ್ವದ ಪ್ರಕಾರ ಕೆಲಸವಾಗದೆ, ಒಬ್ಬರಿಗೊಬ್ಬರಿಗೆ ಭಿನ್ನಾಭಿಪ್ರಾಯ ಬಂದು ಈ ಸಹಕಾರಿ ಬೇಸಾಯ ಪದ್ಧತಿ ಯಶಸ್ವಿಯಾಗಲಿಲ್ಲವೆಂದು ಹೇಳಬಹುದು, ಇದಕ್ಕೆ ನಾನಾ ಕಾರಣಗಳೂ ಇವೆ. ಈ ಸಹಕಾರಿ ಬೇಸಾಯದ ಪದ್ಧತಿಯಲ್ಲಿ ಸಾಧಕ ಬಾಧಕಗಳೆರಡೂ ಉಂಟು. ನಾನು ಮೊದಲು ಬಾಧಕಗಳ ಬಗ್ಗೆ ಹೇಳಿ ನಂತರ ಸಾಧಕಗಳ ಬಗ್ಗೆ ಹೇಳುತ್ತೇನೆ, ಇದರಿಂದ ಆಗತಕ್ಕಂಥ ಬಾಧಕಗಳೇನೆಂದರೆ, ವೆಸ್ಟೆಡ್ ಇಂಟರೆಸ್ಟ್ (Vested Interest) ಇಲ್ಲದೆ ಕಾರಣ ಅದಕ್ಷತೆ ಮತ್ತು ಆಲಕ್ಷತನ ಬೆಳೆಯುತ್ತಿದೆ, ವ್ಯಕ್ತಿಗತವಾದಂಥ ಉತ್ಸಾಹ ಕಡಿಮೆಯಾಗುತ್ತದೆ. ತನ್ನತನವೆನ್ನುವುದು ಕಡಿಮೆಯಾಗುತ್ತಿದೆ, ಇದರಿಂದ ಸಾಂದ್ರ ಬೇಸಾಯದ ಪದ್ಧತಿಯನ್ನು ಸಾಧಿಸುವುದು ಕಷ್ಟವಾಗಿದೆ, ಜೊತೆಗೆ ಬುದ್ಧಿಜೀವಿಗಳು ಅಶಿಕ್ಷಿತರನ್ನು ಶೋಷಣೆ ಮಾಡತಕ್ಕಂಥ ಸಂದರ್ಭಗಳೂ ಸಹ ಇದರಲ್ಲಿ ಇರುತ್ತದೆ, ಇನ್ನು ಈ ಸಹಕಾರಿ ಬೇಸಾಯದ ಪದ್ಧತಿಯಿಂದ ಆಗತಕ್ಕಂಥ ಸಾಧಕಗಳೇನೆಂದರೆ, (೧) ಲೆಕ್ಕಾಚಾರದ ಹಿಡುವಳಿಗಳು ಇಲ್ಲದ ಕಾರಣ, ಅವು ಸಾಗುವಳಿ ಮಾಡುವುದಕ್ಕೆ ತೊಂದರೆಯಾಗುತ್ತದೆ, (೨) ದೊಡ್ಡ ಪ್ರಮಾಣದ ಮೇಲಿಂದ ಅಂದರೆ ಸಾಮೂಹಿಕ ಸಾಗುವಳಿಯನ್ನು ಸಾಧಿಸುವುದಕ್ಕೆ ಸಾಧ್ಯವಿದೆ, (೩) ಯಾಂತ್ರಿಕ ಸಾಗುವಳಿಗೆ ಅನುಕೂಲವಿದೆ, ಇದರಿಂದ ಸಮಯದ ಉಳಿತಾಯವಾಗುವುದಲ್ಲದೆ ಸಮಯಕ್ಕೆ ಸರಿಯಾಗಿ ಬಿತ್ತನೆ ಮಾಡುವುದಕ್ಕೆ ಸಾಧ್ಯವಿರುತ್ತದೆಯಲ್ಲದೆ ಬೆಳೆಯಾಗತಕ್ಕಂಥ ಭರವಸೆಯೂ ಇರುತ್ತದೆ, (೪) ಸುಧಾರಿಸಿದ ಸಾಗುವಳಿ ಮಾಡುವುದಕ್ಕೆ ಸಾಧ್ಯವಿರುತ್ತದೆ, (೫) ವ್ಯವಸಾಯದ ಹುಟ್ಟುವಳಿಯನ್ನು ಪೇಟೆಗೆ ಸಾಗಿಸುವುದಕ್ಕೆ, ಮಾರಾಟ ಮಾಡುವುದಕ್ಕೆ ಹಾಗೂ ಪೇಟೆಯಿಂದ ವ್ಯವಸಾಯಕ್ಕೆ ಗೊಬ್ಬರ, ಆಗತ್ಯವಿರುವಂತಹ ಬೀಜ ಮುಂತಾದವುಗಳನ್ನು ತರುವುದಕ್ಕೆ ಸಾಧ್ಯವಿರುತ್ತದೆ, (೬) ಹಣಕಾಸಿನ ಸಂಸ್ಥೆಗಳಿಂದ, ಬ್ಯಾಂಕ್‌ಗಳಿಂದ ಸಕಾಲದಲ್ಲಿ ಸೋವಿ ಬಡ್ಡಿ ದರದಲ್ಲಿ ಹಣಕಾಸಿನ ನೆರವನ್ನು ಪಡೆಯಲು ಸಾಧ್ಯವಿರುತ್ತದೆ, (೭) ವ್ಯವಸಾಯ ಕಾರ್ಮಿಕರಿಗೆ ಗೈನ್‌ಫುಲ್ ಎಂಪ್ಲಾಯಮೆಂಟ್ (gainful employment) ಈ ಪದ್ಧತಿಯಿಂದ ಸಿಗುತ್ತದೆ, ಆದೇ ಸ್ವಂತವಾಗಿ ಕಡಿಮೆ ಜಮೀನಿದ್ದರೆ ವರ್ಷಪೂರ್ತಿ ಕೆಲಸವಿರುವುದಿಲ್ಲ, ಜೊತೆಗೆ ಈ ಪದ್ಧತಿಯಿಂದ ಸರ್ಕಾರಕ್ಕೆ ಬರಬೇಕಾದಂಥ ಬಾಕಿ ಹಣ ಜಾಗ್ರತೆ ವಸೂಲಿಯಾಗುತ್ತದೆ, (೮) ಈ ಪದ್ಧತಿಯಿಂದ ರೈತರನ್ನು ಭೇಟಿಯಾಗುವುದು ಸುಲಭ, ಮತ್ತು ಜಮೀನಿನಲ್ಲಿ ಪ್ರಾತ್ಯಕ್ಷಿಕ ಪ್ರಯೋಗಗಳನ್ನು ಏರ್ಪಡಿಸಲು ಸಾಧ್ಯವಾಗುತ್ತದೆ, (೯) ಸರ್ಕಾರದ ಧೋರಣೆಯನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಸುಲಭವಾಗುತ್ತದೆ, (೧೦) ಸರ್ಕಾರಕ್ಕೆ ಆಗತ್ಯವಾದಂಥ ಖಾತ್ರಿ ಅಂಕಿಅಂಶಗಳನ್ನು ಪಡೆಯಲು ಈ ಪದ್ಧತಿಯಿಂದ ಅನುಕೂಲವಾಗುತ್ತದೆ, ಆದೇ ವ್ಯಕ್ತಿಗತವಾಗಿ ಇಂಡಿವಿಜುಯಲ್ ಆಗಿ ವ್ಯವಸಾಯ ಮಾಡುತ್ತಿದ್ದರೆ ಸರಿಯಾದಂಥ ಅಂಕಿ ಅಂಶಗಳನ್ನು ಕಲೆಹಾಕುವದಕ್ಕಾಗುವುದಿಲ್ಲ, (೧೧) ಸಹಕಾರಿ ಬೇಸಾಯ ಸಂಘಗಳಿದ್ದರೆ, ಸಾಗುವಳಿಗೆ ಆಗತಕ್ಕಂಥ ಖರ್ಚನ್ನು ಮತ್ತು ಅದರಿಂದ ಬರತಕ್ಕಂಥ ಉತ್ಪನ್ನವನ್ನು ಲೆಕ್ಕಾಚಾರ ಹಾಕಲು ಸುಲಭವಾಗುತ್ತದೆ. (೧೨) ನಿಯಮಿತವಾಗಿ ಹೆಚ್ಚಿನ ಉತ್ಪಾದನೆಯಾಗುತ್ತದೆ, (೧೩) ಈ ಬೇಸಾಯಗಾರರ ಜೀವನದ ಅಂತಸ್ತು ಹೆಚ್ಚುತ್ತದೆ, (೧೪) ಮತ್ತೊಂದು ಮುಖ್ಯವಾದಂಥ ಅಂಶವೆಂದರೆ ಇದರಿಂದ ಪ್ರಜಾಸತ್ತಾತ್ಮಕ ವಿಚಾರ ಅವರಲ್ಲಿ ಬೆಳೆಯಲು ಅವಕಾಶವಾಗುತ್ತದೆ. ತನ್ಮೂಲಕ ರಾಷ್ಟ್ರೀಯ ಮನೋಭಾವನೆ ಅವರಲ್ಲಿ ಬೆಳೆಯುತ್ತದೆ. ಇವೆಲ್ಲಾ ಕೆಲವು ಸಾಧಕಗಳು ಎಂದು ಹೇಳಬಹುದು.

ಇನ್ನು ಈ ಸಹಕಾರ ಬೇಸಾಯ ಕಾರ್ಯಕ್ರಮವನ್ನು ಪುನರ್ವಸತಿ ಯೋಜನೆ ಹಾಗೂ ಅಭಿವೃದ್ಧಿ ದಿಶೆಯಲ್ಲಿ ಕೈಕೊಳ್ಳಲಾಯಿತು, ಆದಕಾರಣ ಈ ಕಾರ್ಯಕ್ರಮದ ಸಾಧನೆಯನ್ನು ಒಂದು ವ್ಯವಹಾರಿಕ ದೃಷ್ಟಿಯಿಂದಾಗಲೀ, ಅಥವಾ ಈ ದಿಶೆಯಲ್ಲಿ ಗುರಿತಾಯಿಸಿದ ಹಣಕಾಸಿನ ಸಫಲತೆ, ಅದರ ಲಾಭನಷ್ಟಗಳ ಮೇಲೆ ಅಳತೆ ಮಾಡದೆ, ಈ ಕಾರ್ಯಕ್ರಮದಲ್ಲಿ ತೊಡಗಿದ ಬಡ ಕುಟುಂಬಗಳ ಉದ್ಯೋಗ, ಹಾಗೂ ಅವರು ನಡೆಯಿಸಿದ ಜೀವನವನ್ನು ನಾವು ಲಕ್ಷಿಸಬೇಕಾಗಿದೆ. ಈ ಒಂದು ದಿಶೆಯಲ್ಲಿ ನಾವು ಈ ಹಿಂದಿನ ಕಾರ್ಯಕ್ರಮವನ್ನು ಸಿಂಹಾವಲೋಕನ ಮಾಡಿದಲ್ಲಿ, ಕರ್ನಾಟಕ ರಾಜ್ಯದಲ್ಲಿ ತಾ|| ೩೦ನೇ ಜೂನ್ ೧೯೭೫ರ ಅವಧಿಗೆ ೧೨೦ ಲಕ್ಷ ರೂ ಗಳಷ್ಟು ಆರ್ಥಿಕ ನೆರವನ್ನು ಸುಮಾರು ೬೦೦ ಬೇಸಾಯ ಸಹಕಾರ ಸಂಘಗಳಿಗೆ ಕೊಡಲಾಗಿತ್ತು, ಒಟ್ಟು ೬೭ ಸಾವಿರ ಎಕರೆ ಭೂಮಿಯು ಪೈಕಿ ೪೦,೪೨೩ ಎಕರೆ ಭೂಮಿಯಲ್ಲಿ ಈ ಸಂಘಗಳು ಸಾಗುವಳಿ ಮಾಡಿದವು. ಮತ್ತು ಸರ್ಕಾರದವರು ಪ್ರತಿ ಎಕರೆಗೆ ೩೦೦ ರೂ. ಗಳ ಪ್ರಕಾರ ನೆರವನ್ನು ಒದಗಿಸಿದ್ದರು, ಜೊತೆಗೆ ಈ ಸಂಘಗಳಲ್ಲಿ ತೊಡಗಿದ ಕುಟುಂಬಗಳ ಶ್ರಮ, ಮಾನವಿ ಶಕ್ತಿ, ಇವೆಲ್ಲವನ್ನು ಪರಿಗಣಿಸಿದಲ್ಲಿ ಎಕರೆಯೊಂದಕ್ಕೆ ಒಂದು ಸಾವಿರ ರೂ. ಗಳಷ್ಟು ಸಾಗುವಳಿ ಖರ್ಚು ಬಂದಂತಾಗಿದೆ. ಸರ್ಕಾರದವರು ಒದಗಿಸಿದ ಈ ಹಣದಿಂದ ಸುಮಾರು ೧೬,೦೦೦ ಬಡ ಹಾಗೂ ಚಿಕ್ಕ ಹಿಡುವಳಿದಾರರಿಗೆ ಸಹಾಯ ಒದಗಿಸಿದಂತೆ ಆಯಿತು ಮತ್ತು ಒಟ್ಟು ಅಂದಾಜು ೨೫೦ ಲಕ್ಷ ರೂ.ಗಳಷ್ಟು ಹಣವನ್ನು ೪೦,೪೦೦ ಎಕರೆಯ ಮೇಲೆ ತೊಡಗಿಸಿದಂತೆ ಆಯಿತು, ಅಂದರೆ ಪ್ರತಿ ಎಕರೆಗೆ ೬೦೦ ರೂ. ಗಳ ಪ್ರಕಾರ ಸಾಗುವಳಿಗಾಗಿ ತೊಡಗಿಸಿದಂತಾಯಿತು ಮತ್ತು ಈ ಒಂದು ಕಾರ್ಯಕ್ರಮದ ಅಂಗವಾಗಿ ಪ್ರತಿ ಎಕರೆಯಲ್ಲಿ ಸರಾಸರಿ, ೩ ಕ್ವಿಂಟಾಲ್‌ನಷ್ಟು ವ್ಯವಸಾಯದ ಉತ್ಪನ್ನವನ್ನು ಹೆಚ್ಚಿಸಿದಂತೆ ಆಯಿತು, ಅಂದರೆ ಒಟ್ಟು ೧೨೧೦೦೦ ಕ್ವಿಂಟಾಲ್‌ನಷ್ಟು ವ್ಯವಸಾಯ ಉತ್ಪನ್ನವಾಗಿದೆ. ಇದರಿಂದ ೧೨೧ ಲಕ್ಷ ರೂ. ಬೆಲೆ ಬಾಳುವಷ್ಟು ಆಹಾರ ಉತ್ಪಾದನೆಯಾದಂತಾಯಿತು, ಈ ಕ್ರಮದಿಂದ ಬಡ ಕುಟುಂಬದ ಜನರಿಗೆ ಒಂದು ಗೈನ್‌ಫುಲ್ ಎಂಪ್ಲಾಯ್‌ಮೆಂಟ್ (Gainful employment) ಒದಗಿಸಿದಂತಾಗಿದೆಯಲ್ಲದೆ ಅವರಿಗೆ ತುಂಬಾ ಉಪಕಾರ ಮಾಡಿದಂತೆ ಆಗಿದೆ. ಇದರ ಜೊತೆಗೆ ಈ ಸಹಕಾರಿ ಬೇಸಾಯವು ಈ ಮೊದಲು ನಾನು ಹೇಳಿದ ಹಣದ ಗಾತ್ರದಿಂದ ೪೦ ಸಾವಿರ ಎಕರೆಯಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಅವಕಾಶವಾಯಿತಲ್ಲದೆ, ಬಡಜನತೆಗೂ ಪೂರ್ಣ ಉದ್ಯೋಗವನ್ನು ಕಲ್ಪಿಸುವುದಕ್ಕೆ ಅವಕಾಶವಾಯಿತು, ಹೀಗೆ ಇದು ನಾನಾ ರೀತಿಯಿಂದ ಉತ್ತೇಜನಕಾರಿಯಾಗಿದೆ. ಹೀಗೆ ಉದಾತ್ತ ಧ್ಯೇಯದಿಂದ ಪ್ರಾರಂಭವಾದ ಈ ಒಂದು ಕಾರ್ಯಕ್ರಮವು ಅನೇಕ ಕಾರಣಗಳಿಂದ ಇತ್ತೀಚೆಗೆ ಪ್ರಗತಿಯಾಗಲಿಲ್ಲ, ಅದಕ್ಕೆ ಕಾರಣಗಳು ಈ ರೀತಿಯಿವೆ.

(1) Want of awakening among illiterate small poor farmers, regarding advantage of co-operative forming.

(2) Absence of favourable ideological atmosphere for co-operative farming.

(3) Dearth of devoted deligent local leadership to guide and maintaing co operative farming societies.

(4) Lack of co-ordinated efforts and assistance to co operative farming societies.

[*Madam Speaker* in the Chair]

ಈ ತರದ ಒಂದು ಮಾನ್ಯತೆ ಸಹಕಾರ ಸಂಘಗಳ ಮುಖಾಂತರ ಮಾಡುವ ಬೇಸಾಯ ಪದ್ಧತಿಗೆ ದೊರಕಬೇಕು ಇಲ್ಲದೆ ಹೋದರೆ ಸಹಕಾರ ಬೇಸಾಯ ಪದ್ಧತಿ ಯಶಸ್ವಿಯಾಗದೆ ಇರುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಬೇಕಾಗುತ್ತದೆ. ಈ ರೀತಿ ನಮ್ಮ ಸಹಕಾರ ಸಂಘಗಳನ್ನು ಮತ್ತು ಅದರ ಮುಖಾಂತರ ನಡೆಯುವ ರೀತಿಯಲ್ಲಿ ಇವನ್ನು ಪುನಃ ಶ್ಚೇತಗೊಳಿಸುವುದಕ್ಕೆ ಸರ್ಕಾರ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ ನಮ್ಮ ಸರ್ಕಾರದವರು ಏನು ಒಂದು ಫ್ಯಾಮಿಲಿಪ್ಲಾನಿಂಗ್ ಯೋಜನೆಯನ್ನು ಹೇಗೆ ಹಾಕಿಕೊಂಡಿದ್ದಾರೆ ಅದೇ ರೀತಿ ಇದಕ್ಕೂ ಒಂದು ಯೋಜನೆಯನ್ನು ಇಟ್ಟುಕೊಂಡು ಇದಕ್ಕೆ ತಜ್ಞರಲ್ಲಿ

ಸಲಹೆಯನ್ನು ಪಡೆದು ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ಕಾರ್ಯವನ್ನು ಕೈಕೊಂಡಲ್ಲಿ ಜನರಲ್ಲಿ ಒಂದು ಜಾಗೃತಿ ಉಂಟಾಗುತ್ತದೆನ್ನುವ ಭರವಸೆ ನನಗೆ ಇದೆ. ಇನ್ನು ಮುಂದೆ ಬೇಸಾಯದಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿ ಮಾಡಬೇಕಾದರೆ ಮೊದಲು ಎಲ್ಲಾ ದೃಷ್ಟಿಯಿಂದಲೂ ಸಹಕಾರ ಬೇಸಾಯ ಕ್ರಮ ಯಶಸ್ವಿಯಾಗಬೇಕಾದರೆ ಇದಕ್ಕೆ ಒಂದು ಸಂಶೋಧನೆಯನ್ನು ತಜ್ಞರಿಂದ ಮಾಡಿಸಬೇಕು ಜೊತೆಗೆ ಇದಕ್ಕೆ ಪರಿಹಾರವನ್ನು ಮತ್ತು ಪ್ರೋತ್ಸಾಹವನ್ನು ಒದಗಿಸುವಂತಹ ಪ್ರಚಾರ ಮಾಡತಕ್ಕಂಥಾದ್ದು ಬಹಳ ಅವಶ್ಯಕ. ಬೇಸಾಯದಲ್ಲಿ ಪ್ರತ್ಯಕ್ಷ ಕಾರ್ಯಾಚರಣೆ ನೀಡುವಂತ ಸಂಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇದನ್ನು ಸುಮ್ಮನೆ ಯಾರೋ ಮಾಡತಕ್ಕಂಥದ್ದಲ್ಲ. ಗ್ರಾಮೀಣ ರೈತರಿಗೆ ರೂರಲ್ ಅಗ್ರಿಕಲ್ಚರ್ ಬಗ್ಗೆ ಎಲ್ಲಾ ವಿಚಾರವನ್ನು ಬಹಳ ಶಿಸ್ತಿನಿಂದ ತರಬೇತಿ ಕೊಡಬೇಕು. ಇದನ್ನು ಸಂಘಟನೆ ಮಾಡಬೇಕು ರಾಜ್ಯ ಮಟ್ಟದಲ್ಲಿ ಸಂಘಟನೆ ಮಾಡಬೇಕಾದರೆ ಸರಕಾರ ಸಿಬ್ಬಂಧಿಯವರು ಜನತಾ ಪ್ರತಿನಿಧಿಗಳು ಇಬ್ಬರೂ ಇರಬೇಕು. ಹೀಗೆ ಸಹಕಾರ ಇಲಾಖೆ ಕೆಲಸಮಾಡಲು ಕೋ ಆಪರೇಷನ್ ವ್ಯಾಪ್ತಿಗೆ ಹೋಗಬಹುದು. ಕೋ ಅಪರೇಷನ್ ಇಲಾಖೆಯಲ್ಲಿ ಮತ್ತು ಅಗ್ರಿಕಲ್ಚರಲ್ ಇಲಾಖೆಯಲ್ಲಿ ವರ್ಗಾವರ್ಗಿ ಮಾಡುವಾಗ ಸ್ವಲ್ಪ ಯೋಚನೆ ಮಾಡಿಕೊಡಬೇಕು. ಏತಕ್ಕೆಂದರೆ ಈ ಬೇಸಾಯ ಕ್ರಮದಲ್ಲಿ ಅನುಭವ ಪಡೆದವರನ್ನು ಆಗಿಂದಾಗ ವರ್ಗ ಮಾಡಿದರೆ ಅದಕ್ಕೆ ಧಕ್ಕೆ ಬರುತ್ತದೆ. ಇನ್ನು ಅನೇಕ ಸಹಕಾರ ಸಂಘಗಳು ಫಾರ್ಮಿಂಗ್ ಸೊಸೈಟಿ ವ್ಯಾಪ್ತಿಗೆ ಕೊಡಬೇಕು. ಇದಕ್ಕೆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸಿನಿಂದ ವಿಮುಕ್ತಿ ಅಗತ್ಯ. ಒಬ್ಬ ರೈತ ಫುಡ್ ಕ್ರಾಪ್ಸ್ ಆಹಾರೇತರ ಬೆಳೆ (non-food crops) ತೆಗೆಯಬೇಕಾದರೆ 3 ಎಕರೆಗಿಂತ ಹೆಚ್ಚಿಗೆ ದ್ರಾಕ್ಷಿ ಬೆಳೆದರೆ ಅವನ್ನು Eligible for Income Tax ಲೈಯಬಲ್ ಫಾರ್ ಇನ್‌ಕಂ ಟ್ಯಾಕ್ಸ್ ಈಗ ನೂರು ಎಕರೆ ಜಮೀನನ್ನು ಫಾರ್ಮಿಂಗ್ ಕೊಟ್ಟು ಅದರಲ್ಲಿ ದ್ರಾಕ್ಷಿ ಮೂರು ಎಕರೆಗಿಂತ ಹೆಚ್ಚಿಗೆ ಬೆಳೆದರೆ ಅದಕ್ಕೆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಕೊಡಬೇಕೆಂದರೆ ಸಹಕಾರಿ ಬೇಸಾಯಕ್ಕೆ ನಿರಾಶೆ ನಿರುತ್ಸಾಹಿಯಾಗುತ್ತದೆ. ಆದ್ದರಿಂದ ಅದಕ್ಕೆ ವಿಮುಕ್ತಿ ಕೊಡಬೇಕಾಗುತ್ತದೆ. ಸರ್ಕಾರದಿಂದ ಸಿಕ್ಕತಕ್ಕಂಥ ಸೌಲಭ್ಯಗಳನ್ನು ಬೇಸಾಯ ಸಹಕಾರ ಸಂಘಕ್ಕೆ ಕೊಟ್ಟರೆ ಒಳ್ಳೆಯದು. ಏತಕ್ಕೆಂದರೆ ಯಾವುದಾದರು ಸೌಲಭ್ಯ Individual (ವ್ಯಕ್ತಿಗೆ, ಇಂಡಿವಿಜುಯಲ್‌ಗೆ ಕೊಡುವುದಕ್ಕಿಂಥ ಸಹಕಾರ ಸಂಘಗಳ ಮುಖಾಂತರ ಕೊಟ್ಟರೆ ಆ ಸಂಘದಲ್ಲಿರುವವರಿಗೆಲ್ಲಾ ಆ ಲಾಭ ಸಿಕ್ಕುತ್ತದೆ, ಆದ್ದರಿಂದ ಬೇಸಾಯ ಸಹಕಾರಿ ಸಂಘಕ್ಕೆ ಪ್ರಾಧಾನ್ಯತೆ ಕೊಟ್ಟರೆ ಒಳ್ಳೆಯದು. ಇನ್ನು ನಮ್ಮ ಭಾಗದಲ್ಲಿ ವರಲಕ್ಷ್ಮಿ ಹತ್ತಿ ಬೆಳೆದವರಿಗೆ ಈ ಬೇಸಾಯ ಸಹಕಾರ ಸಂಘಗಳ ಮುಖಾಂತರ ಕೊಟ್ಟಿದ್ದರೆ ಎಲ್ಲರಿಗೂ ಲಾಭ ಸಿಕ್ಕುತ್ತಿತ್ತು. ಇನ್ನು ಈ ಬೇಸಾಯದಲ್ಲಿ ತಾಂತ್ರಿಕ ಜ್ಞಾನದ ನೆರವು ಸಿಕ್ಕುವಂತೆ ಬೇರೆ ಬೇರೆ ಅಭಿವೃದ್ಧಿ ಆಗುವಂತೆ ಈ ಮುಂದುವರಿದ ರೀತಿಯಲ್ಲಿ ನಮ್ಮ ಜನರಿಗೆ ಸಿಕ್ಕಬೇಕು. ಅದನ್ನು ನೀಡಿದರೆ ವ್ಯವಸಾಯದಲ್ಲಿ ಸಹಕಾರ ಮತ್ತು ಅಗ್ರಿಕಲ್ಚರ್ ಇಲಾಖೆಯವರ ಸಹಾಯ ಬಹಳ ಅವಶ್ಯವಾಗಿ ಬೇಕಾಗುತ್ತದೆ. ಈ ವ್ಯವಸಾಯವನ್ನು ಸಾಮಾನ್ಯ ಜನರು ಏನು ತಿಳಿದಿದ್ದಾರೆಂದರೆ ಇದು ಬರೀ ಡಲ್ಲರ್ಸ್ ಧಡ್ಡಾರ (Dullers) ಕೆಲಸ ಎಂದು ಇದು ವ್ಯಾಪಕವಾಗಿದೆ. ನಿಜವಾಗಿಯೂ ನೋಡುವುದಾದರೆ ಇದು ಬಹಳ ಡೆಲಿಕೇಟ್ (ನಾಜೂಕಾದ ಕೆಲ್ಸ) ಇದು Theory ಮತ್ತು ಪ್ರಾಕ್ಟಿಕಲ್ ಕೂಡಿದ್ದಾಗಿದೆ ಎಂದು ಹೇಳುವ ಹಾಗೆ ವ್ಯವಸಾಯ ಇಲಾಖೆಯವರು ಮುತುವರ್ಜಿ ವಹಿಸಿ ಕೆಲಸಮಾಡಬೇಕಾಗುತ್ತದೆ. ಇವರಿಗೆ ತಾಂತ್ರಿಕ ಜ್ಞಾನವನ್ನು ಕೊಡಬೇಕು. ಗ್ರಾಮ ಸೇವಕರಿಗೆ ವ್ಯವಸಾಯದ ಬಗ್ಗೆ ಸರಿಯಾದ ತರಬೇತಿಯನ್ನು ಕೊಟ್ಟು ಸಾಮಾನ್ಯ ರೈತರಿಗೆ ಇವರು ಡೆಮಾನ್‌ಸ್ಟ್ರೇಷನ್ ಮಾಡಿ ತೋರಿಸುವ ರೀತಿಯಲ್ಲಿ ಇವರನ್ನು ತರಬೇತಿಮಾಡಿ ಕಳುಹಿಸಬೇಕಾಗುತ್ತದೆ, ಅವರು ಏನು ಸರ್ಕಾರಿ ಸರ್‌ಕ್ಯೂಲರಿ ಏನು ಇದೆ ಆ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಮುಂಜಾನೆ 8 ಗಂಟೆ ಬಂದು ಫಾರಂಗೆ ಹೋಗಿ ವೆದರ್ (Field conditions observe) ಕಂಡೀಷನ್ಸ್ ಅಬ್‌ಸರ್ವ್ ಮಾಡಬೇಕಾಗುತ್ತದೆ. ಎಲ್ಲಾ ಫಾರ್ಮಿಂಗ್ ಸೊಸೈಟಿಗಳು ಇರುವ ಜಾಗದಲ್ಲಿ ಡೆಮಾನ್‌ಸ್ಟ್ರೇಷನ್ ಸೆಂಟರ್ ಎಂದು ಆ ಭೂಮಿಯನ್ನು ಮಾಡಿದರೆ ಟೆಕ್ನಿಕಲ್ ನಾಲೆಡ್ಜ್ ಫಾರ್ಮಿಂಗ್‌ನಲ್ಲಿ ಬರಬೇಕು. ಇನ್ನು ಸರ್ಕಾರ ಮುಂದೆ ಒಂದು ವಿಚಾರ ಮಾಡಿ ಒಂದು ಸದ್ಭಾವನೆಯಿಂದ ಇದಕ್ಕೆ ಒಂದು ಯೋಜನೆ ಹಾಕಿದ್ದು 10-20 ಕಡೆ ಪ್ರಾಕ್ಟಿಕಲ್ ಆಗಿ ನೋಡಿ ಮಾಡಿ ಅದರಿಂದ ಎಷ್ಟು ಉಪಯೋಗ ಜನರಿಗೆ ದೊರಕುತ್ತದೆ ಮತ್ತು ಅದರಿಂದ ಎಷ್ಟು ಉತ್ಪಾದನೆ ಹೆಚ್ಚುತ್ತದೆಂದು ತಿಳಿಯುತ್ತದೆ. ನಾನು ಒಂದೆರಡು ಫಾರ್ಮಿಂಗ್

ಸೊಸೈಟಿಗಳನ್ನು ನಡೆಸುತ್ತಿದ್ದೇನೆ. ಸುಮಾರು 600 ಫಾರ್ಮಿಂಗ್ ಸೊಸೈಟಿಗಳು ರಾಜ್ಯದಲ್ಲಿ ಇವೆ. ಅವಕ್ಕೆ ಸರಿಯಾದ ಲೋಕಲ್ ಲೀಡರ್‌ಷಿಪ್ (ಸ್ಥಳೀಯ ಕಾರ್ಯಕರ್ತ/ನಾಯಕರ ಅಭಾವವಿದೆ) ಇಲ್ಲದೆ ಇರುತ್ತವೆ. ಎಲ್ಲಿ ಸರಿಯಾದ ಕಾರ್ಯಕರ್ತರು ಇದ್ದಾರೆ ಅಂತಹ ಕಡೆ ಇದು ಬಹಳ ಯಶಸ್ವಿಯಾಗಿ ನಡೆಯುತ್ತದೆ. ಇದರಲ್ಲಿ ಎಲ್ಲ ಮೆಂಬರ್‌ಗಳನ್ನು ಕೆಲಸದಲ್ಲಿ ತೊಡಗಿಸಿ (ಇನ್‌ವಾಲ್ವ್ ಮಾಡಿ) ಎಕಾನಾಮಿಕಲ್ ಆಗಿ ಒಕ್ಕಲುತನವನ್ನು ನಡೆಯುವಂತೆ ಮಾಡಬೇಕು. ಆಕಾಶ ಅಲ್ಪ ಮಳೆಯಾಗತಕ್ಕ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಸಾಕಷ್ಟು ಇನ್‌ವೆಸ್ಟ್ ಮಾಡಿ ಲುಕ್ಸಾನು ಆಗಿದೆ, ಕಾರ್ಯಕರ್ತರಿಂದ ಸರಿಯಾಗಿ ತಾಂತ್ರಿಕಜ್ಞಾನವನ್ನು ಕೊಟ್ಟು ಇದು ಲೆಕ್ಕಚಾರವಾಗಿ ಎಕಾನಾಮಿಕಲ್ ಆಗಿ ಹೆಚ್ಚು ಉತ್ಪತ್ತಿ ಮಾಡತಕ್ಕಂಥ ಅಂತಹ ಕಾರ್ಯಕರ್ತರ ಟ್ರೈನಿಂಗ್ ಅತ್ಯಗತ್ಯ ಎಂದು ಹೇಳುತ್ತಿದ್ದೇನೆ. ಹಾಗೆಯೇ ಅಭಿವೃದ್ಧಿ ಇಲಾಖೆ ಏನು ಇದೆ ಅದನ್ನು ಚೇತನ ಮಾಡಿದರೆ ಫಾರ್ಮಿಂಗ್ ಸೊಸೈಟಿಗಳು ಯಶಸ್ವಿಯಾಗುತ್ತದೆ ಅದಕ್ಕೆ ಜನರನ್ನು ತಯಾರು ಮಾಡಬೇಕಾಗುತ್ತದೆ. ಇನ್ನು ಭೂಸುಧಾರಣೆ ಕಾಯ್ದೆ ನಮ್ಮಲ್ಲಿ ಕಾರ್ಯಗತ ಬಂದಾಗ ಸರ್‌ಪ್ಲಸ್ ಹೆಚ್ಚಿಗೆ ಭೂಮಿ ಇವೆ ಅದನ್ನು ಕೊಡುತ್ತಾರೆ. ಸಾಧಾರಣವಾಗಿ ಭೂಹೀನರಿಗೆ ನಾಲ್ಕಾರು ಎಕರೆಗೆ ಎಕಾನಾಮಿಕ್ ಹೋಲ್ಡಿಂಗ್ ಆದರೆ ಪ್ರತಿಯೊಂದು ಕುಟುಂಬಕ್ಕೂ ಒಂದು ಜೊತೆ ಎತ್ತುಗಳು ತೆಗೆದುಕೊಂಡರೆ ಅವನು ಸಾಗು ಮಾಡಲು ಲೆಕ್ಕಾಚಾರವಾಗುವುದಿಲ್ಲ (un-economic) ಇದೆಲ್ಲವನ್ನೂ ಕೂಡಿಸಿದರೆ ಅದು ಏನು ಅಷ್ಟು ಪ್ರಯೋಜನವಾಗುವುದಿಲ್ಲ. 1915ರಲ್ಲಿ ರಷ್ಯಾದಲ್ಲಿ ಆದಂತೆ ಆಗುತ್ತದೆ. ಇನ್ನು ಸರ್ವೀಸ್ ಸೊಸೈಟಿಗಳ ಪಾತ್ರ ಬರುತ್ತದೆ. ಸಿಕ್ಕ ಜನರನ್ನು ಇಟ್ಟುಕೊಂಡು ನಮ್ಮ ರಾಜ್ಯದಲ್ಲಿ ಈ ಸಹಕಾರ ಬೇಸಾಯವನ್ನು ಪುನಃಶ್ಚೇತನಗೊಳಿಸಬೇಕೆಂದು ಈ ಸಲಹೆಯನ್ನು ತಮ್ಮ ಮುಂದೆ ಇಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಹೊರಕೇರಿಯವರು ಇಟ್ಟಿರತಕ್ಕಂಥ ನಿರ್ಣಯ ಅತ್ಯಂಥ ಉಚಿತವಾದ ನಿರ್ಣಯವೆಂದು ನಾನು ಭಾವಿಸುತ್ತೇನೆ. ಮಾನ್ಯ ಹೊರಕೇರಿಯವರು ಮಾತನಾಡುತ್ತಿದ್ದಂಥಾ ಕಾಲದಲ್ಲಿ ನನಗೆ ಇದ್ದಂತಹ ಕೆಲವು ಸಂಶಯಗಳನ್ನು ಅವರಿಗೆ ಕೇಳಿದೆ. ನಮ್ಮ ಹಿಂದುಳಿದ ಭಾಗಗಳಲ್ಲಿ ಈ ಸಹಕಾರ ಬೇಸಾಯ ಪದ್ಧತಿಯನ್ನು ತೀವ್ರಗೊಳಿಸುವುದು ಬಹಳ ಅಗತ್ಯ. ಆದರೆ ಇದರಲ್ಲಿ ಒಂದು ಸಂಶಯವೇನೆಂದರೆ, ಸಹಕಾರ ಕ್ಷೇತ್ರಗಳ ಬಗ್ಗೆ ಮಾನ್ಯ ಸದಸ್ಯರು ತಂದಿರುವ ನಿರ್ಣಯದ ಪ್ರಕಾರ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಅದರ ಬಗ್ಗೆ ವಿಶೇಷವಾದ ಅಗ್ರಿಮೆಂಟ್ ಏನಿದೆಯೋ ಅದನ್ನು ಗಮನದಲ್ಲಿಟ್ಟುಕೊಂಡು ವ್ಯವಸಾಯ ಕಾರ್ಯಾಚರಣೆ ತೀವ್ರವಾಗಿ ಮಾಡಬೇಕಾಗಿದೆ. ಅದಕ್ಕಾಗಿ ಈ ಸಭೆಯವರು ಶಿಫಾರಸ್ಸು ಮಾಡಬೇಕಾಗಿದೆ ಈಗ ನಾಡಿನಲ್ಲಿ ಹಾಲಿ ಇರತಕ್ಕ ಬೇಸಾಯ ಸಂಘಗಳು ಏನಿವೆಯೋ ಅವುಗಳನ್ನು ಹೆಚ್ಚು ಕಡಿಮೆ ಪುನಶ್ಚೇತನಗೊಳಿಸಬೇಕಾದುದು ಮತ್ತು ಅದರ ಒಂದು ಮೂಲಭೂತ ಕಲ್ಪನೆ ಈ ಒಂದು ನಿರ್ಣಯದಲ್ಲಿರತಕ್ಕದು. ಈಗ ಅಸ್ತಿತ್ವದಲ್ಲಿರತಕ್ಕ ಸಹಕಾರ ಬೇಸಾಯ ಸಂಘಗಳು ಏನಿವೆಯೋ ಅವು ನಡೆಸತಕ್ಕ ಒಂದೆರಡು ಸಂಘಗಳನ್ನು ಬಿಟ್ಟರೆ ಇನ್ನುಳಿದಂಥ ಬೇಸಾಯ ಸಹಕಾರ ಸಂಘಗಳು ಎಲ್ಲಾ ಕಡಿಮೆ ವರ್ಗದವುಗಳಾಗಿ ಈಗಿನ ಒಂದು ಕಾನೂನಿನಿಂದ ತಪ್ಪಿಸಿಕೊಳ್ಳುವುದಕ್ಕೆ ಮತ್ತು ಯಾವುದೋ ಒಂದು ರೀತಿಯಲ್ಲಿ ಪ್ರತಿನಿಧಿಗಳನ್ನು ಪಡೆಯತಕ್ಕ ಸಂಘಗಳಾಗಿವೆ. ಇದೇ ಹೆಚ್ಚಾಗಿರತಕ್ಕ ಪ್ರಸಂಗವೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಎಂ ಹೊರಕೇರಿ.—ಹಿಂದೆ ಒಂದು ಸಾರಿ ಕೋ ಆಪರೇಟಿವ್ ಫಾರ್ಮಿಂಗ್ ಎಂದರೇನು ಎಂಬ ಬಗ್ಗೆ ನೆಹರೂ ಅವರೇ ಒಂದು ಮಾತನ್ನು ಹೇಳಿದ್ದಾರೆ. ಸಾಮಾನ್ಯವಾಗಿ ಒಂದು ಮನೆತನದಲ್ಲಿ 3-4-5 ಜನರು ಒಂದು ಎಕರೆ ಜಮೀನು ಇಟ್ಟುಕೊಂಡು ಅನ್‌ಡಿವೈಡೆಡ್ ಹಿಂದೂ ಫ್ಯಾಮಿಲಿಯಾಗಿದ್ದುಕೊಂಡು ಕೊನೆಯಲ್ಲಿ ಬಿಕ್ಷುಕರು ಆಗಿರುವುದೂ ಉಂಟು.

ಶ್ರೀ ಕಾಗೋಡು ತಿಮ್ಮಪ್ಪ.—ಅಂತಹ ಕೆಲವೊಂದು ಕುಟುಂಬಗಳಿಗೆ ತಕ್ಕಂತೆ ಕೆಲವು ಕಾಯಿದೆಗಳನ್ನು ಕಾನ್‌ಸ್ಟಿಟ್ಯೂಟ್ ಮಾಡುವುದು ಅದೇನೋ ಬೋನಾಫೈಡಿ ಅಲ್ಲ, ಒಂದು ಅವಿಭಕ್ತ ಕುಟುಂಬದಲ್ಲಿ 3-4-5 ಜನರ ವ್ಯವಹಾರ ಇರುತ್ತದೆ. ಈಗ ನಮ್ಮ ಕಡೆ ಅವಿಭಕ್ತ ಕುಟುಂಬದಲ್ಲಿ ಒಂದು ತಾಲ್ಲೂಕಿನಲ್ಲಿ 150 ಜನರು ಇರತಕ್ಕ ಕುಟುಂಬಗಳೂ ಸಹ ಇರುತ್ತವೆ. ಅಂತಹವರಿಗೆ 50-100 ಎಕರೆ ಜಮೀನು ಇರುತ್ತದೆ. ನನ್ನ ಮನೆಯಲ್ಲಿಯೇ ಒಂದು ಕಾಲದಲ್ಲಿ

50 ಜನರಿದ್ದರು. 20–30 ಎಕರೆ ಜಮೀನನ್ನು ಪಡೆದಿದ್ದರು. ನಾವು ಊರಿನ ಬಾಗಲಲ್ಲಿಯೇ 5–10 ಎಕರೆ ಇಟ್ಟುಕೊಂಡು ಬಹಳ ದೊಡ್ಡ ಕುಟುಂಬದಲ್ಲಿದ್ದವರು ಸರ್ಕಾರದ ಲೆಕ್ಕದಲ್ಲಿ ಸಹಕಾರ ಬೇಸಾಯವನ್ನು ಸೃಷ್ಟಿಮಾಡುವುದು, ಸಂಘಟನೆ ಮಾಡುವುದು, ಪ್ರತ್ಯೇಕ, ಪ್ರತ್ಯೇಕವಾಗಿ ಕುಟುಂಬದಲ್ಲಿರತಕ್ಕವರನ್ನು ಸಂಘಟನೆ ಮಾಡಿ ಅವರನ್ನೆಲ್ಲಾ ಒಂದು ಸಂಘದಲ್ಲಿ ಸೇರಿಸಿ ಅವುಗಳಿಗೆ ರೂಪರೇಷೆಗಳನ್ನು ಕೊಟ್ಟು ನಿಯಮಿತ ಕೆಲಸಕಾರ್ಯಗಳನ್ನು ಮಾಡಬೇಕೆಂದು ನಿಯೋಜಿತ ರೀತಿಯಲ್ಲಿ ಸಂಘಟನೆ ಮಾಡುವುದು ಸಹಕಾರ ಪದ್ಧತಿ. ನಮ್ಮ ಮನೆಯಲ್ಲಿ 50–100 ಜನರು ಇದ್ದರೆ, ಒಂದು ಸಂಘವನ್ನು ರಿಜಿಸ್ಟರ್ ಮಾಡಬೇಕಾದರೆ 2 ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅದನ್ನು ಸಹಕಾರ ಸಂಘವೆಂದು ಹೇಳಿದರೆ ಸರ್ಕಾರದಿಂದ ಅದಕ್ಕೆ ಸಬ್ಸಿಡಿ ಸಿಗುತ್ತದೆ. ಮತ್ತು ಅದಕ್ಕೆ ಎಲ್ಲ ಸೌಕರ್ಯಗಳನ್ನು ಸರ್ಕಾರದವರು ಕೊಡುತ್ತಾರೆ. ಏನಾದರೂ ಸೌಲಭ್ಯಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಕೇವಲ ಒಂದು ಕುಟುಂಬದಲ್ಲಿ ಸೇರಿಕೊಂಡರೆ ಅಷ್ಟು ಅನುಕೂಲವಿಲ್ಲ ಆದರೆ ಈಗ ಒಂದು ಸಹಕಾರ ಸಂಘ ಮಾಡಿದರೆ ನಾವು ಹೇಳುವ ಸಹಕಾರ ತತ್ವಕ್ಕೂ, ಸಹಕಾರ ಸಂಘಗಳಿಗೂ ಎಷ್ಟೋ ವ್ಯತ್ಯಾಸವಾಗುತ್ತದೆ. ಹಾಗೆ ಅವಿಭಕ್ತ ಕುಟುಂಬದಲ್ಲಿದ್ದುಕೊಂಡು ಸಹಕಾರ ಸಂಘ ಎಂದು ರಿಜಿಸ್ಟರ್ ಮಾಡಿಸಿಕೊಂಡು ಸರ್ಕಾರದಿಂದ ಹೆಚ್ಚಿನ ಸೌಲಭ್ಯಪಡೆಯುವಜೊತೆಗೆ ಸಹಕಾರ ಸಂಘ ಹೆಸರಿನಲ್ಲಿಯೇ ಬ್ಯಾಂಕಿನಿಂದ ಹಾಗೂ ಮಿಲ್‌ನಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯುವುದಕ್ಕಾಗುತ್ತದೆಯೇ ಅಂದರೆ ಅದೇನೂ ಇಲ್ಲ. ಸಹಕಾರ ಬೇಸಾಯ ಸಂಘವೆಂದು ರಿಜಿಸ್ಟರ್ ಮಾಡಿಸಿ ಅಂತಹವುಗಳನ್ನು ಸೃಷ್ಟಿ ಮಾಡಿದರೆ ಆಗ ಅದರ ಕಲ್ಪನೆಯೇ ಬೇರೆಯಾಗುತ್ತದೆ. ನಮ್ಮ ರಾಜ್ಯದಲ್ಲಿ ಬೇಸಾಯ ಸಹಕಾರ ಸಂಘಗಳನ್ನು ಸಂಘಟನೆ ಮಾಡಬೇಕು, ಇವುಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಹೇಳುವವರಲ್ಲಿ ನಾನು ಒಬ್ಬ. ಇಲ್ಲದಿದ್ದರೆ ಅಸ್ತಿತ್ವದಲ್ಲಿರತಕ್ಕ ಸಹಕಾರ ಸಂಘಗಳು ಮೂಲ ತತ್ವಕ್ಕೆ ವಿರೋಧವಾಗಿ ನಡೆಯುವುದಕ್ಕೆ ಆಸ್ಪದವಾಗುತ್ತದೆ. ಅವುಗಳ ಬಗ್ಗೆ ನನ್ನ ಅನುಭವನ್ನು ಆಧಾರವಾಗಿಟ್ಟುಕೊಂಡು ಮುಂದೆ ಸಂಘಟನೆಯಾಗುವ ಹೊಸ ಸಹಕಾರ ಸಂಘಗಳನ್ನು ಯಾವ ರೀತಿಯಲ್ಲಿ ಬೇರೆಯವರು ನಡೆಸುತ್ತಿದ್ದಾರೆಂಬುದನ್ನು ಅಲ್ಲಿಗೆ ಹೋಗಿ ನೋಡಿ ಬರಬೇಕು. ನಮ್ಮ ತಾಲ್ಲೂಕಿನಲ್ಲಿಯೇ 33 ಜನರು ಹರಿಜನ ಕುಟುಂಬಗಳು ಇವೆ. ಅಲ್ಲಿ ಪ್ರತಿಯೊಂದು ಕುಟುಂಬಕ್ಕೂ ಒಂದು ಎಕರೆ ಮತ್ತು ಒಂದು ಜೊತೆ ಎತ್ತುಗಳನ್ನು ಕೊಟ್ಟಿದ್ದಾರೆ. ಆದರೆ ಆ ಜಮೀನು ಸುಮಾರು 10 ವರ್ಷಗಳಿಂದಲೂ ಪಾಳು ಬಿದ್ದಿದೆ. ತಾಲ್ಲೂಕು ಬೋರ್ಡ್ ಮುಂಖಾಂತರ ಟ್ರಾಕ್ಟರ್ ಎಲ್ಲಾ ತೆಗೆದುಕೊಂಡು ಒಂದು ವರ್ಷ ಬೀಜ, ಗೊಬ್ಬರ ಹಾಕಿ ಬೆಳೆಸಿದರೂ ಕೊನೆಗೆ ಕಳೆ ಹೋಯಿತು. ಅಲ್ಲಿರತಕ್ಕ ಕಳೆ ಹೋದ ಮೇಲೆ ಪ್ರತಿಯೊಂದು ಕುಟುಂಬಕ್ಕೆ ಕೇವಲ ಐದ್ಹೆದು ಚೀಲ ಮಾತ್ರ ಸಿಗುತ್ತಿದೆ. ಅಲ್ಲಿ ಒಬ್ಬ ಮಧ್ಯಸ್ಥ ನಿಂತುಕೊಂಡು ಆ ಒಂದು ಕುಟುಂಬದಲ್ಲಿ ಕಳೆ ತೆಗೆಯುವುದಕ್ಕೆ ಅಥವಾ ಇನ್ನು ಯಾವುದೋ ಒಂದು ಕೆಲಸಕ್ಕೆ ಮತ್ತು ಅಲ್ಲಿ ಪ್ಲಾಂಟಿಂಗ್ ಮಾಡುವುದಕ್ಕೆ, ಅಥವಾ ಯಾವುದಾದರೂ ಒಂದು ಕೆಲಸವನ್ನು ಎಗ್ಸಿಕ್ಯೂಟ್ ಮಾಡುವುದಕ್ಕೆ ಅಲ್ಲಿಗೆ ಯಾರ್ಯಾರು ಹೋಗಬೇಕು ಎಂಬುದನ್ನು ನಿರ್ಣಯ ಮಾಡುತ್ತಾನೆ. ಅವಿಭಕ್ತ ಕುಟುಂಬದಲ್ಲಿ ಅವರ ಮನೆಗೆ ಬಂದೋನು ಬಂದ, ಹೋದೋನು ಹೋದ ಎಂಬಂತಿರುತ್ತದೆ. ನಮ್ಮಲ್ಲಿ ಅಂಥಾದ್ದು 50 ಕುಟುಂಬಗಳು ಇವೆ. ನಮ್ಮ ಸ್ನೇಹಿತರ ಮನೆಯಲ್ಲಿಯೇ 50 ಜನರು ಇರುವುದನ್ನು ಮಾನ್ಯ ಸಚಿವರೇ ನೋಡಿದ್ದಾರೆ. ಅಂತಹವರಲ್ಲಿ 50 ಎಕರೆ ಜಮೀನು ಇದೆ. ಅವರಲ್ಲಿ ದುಡಿಯುವವರು ಕೇವಲ 15 ಜನರೇ. ಉಕ್ಕಿ ಕಟ್ಟಿದರೆ 15 ಜನರು ಬೇಕಾಗುತ್ತದೆ. ಸುಮಾರು 10 ಎಕರೆ ಜಮೀನನ್ನು ಒಂದು ದಿವಸದಲ್ಲಿಯೇ ಉಳಬಹುದು. ಸರಾಸರಿ ಅಲ್ಲಿರುವವರು 4 ಮಂದಿ. ಎಷ್ಟು ಎಕರೆ ಭೂಮಿ ಇರುತ್ತದೋ ಅಷ್ಟು ಜನರು ಅಲ್ಲಿರುತ್ತಾರೆ. ಅಲ್ಲಿರುವ ಭೂಮಿಯಲ್ಲಿ ಏಕೋ ನನಗೆ ಸಮಾಧಾನಮಾಡುವುದಕ್ಕಾಗಲಿಲ್ಲ. ಪಂಪ್ ಸೆಟ್ಟಿಗೆ ಮಿನಿಮಂ ಚಾರ್ಜ್ ಕೊಡಬೇಕಾದರೆ ಸಾಲ ಮಾಡಿ ಕೊಡಬೇಕು. ಆದರೆ ಅಲ್ಲಿಯ ಕೆಲಸಕ್ಕೆ ಇರುವುದು ಐದಾರು ಜನರು. ಹೀಗಾಗಿ ಸಹಕಾರಿ ಬೇಸಾಯ ಸಂಘ ಕೊಟ್ಟಾದ ಮೇಲೆ ಕೇವಲ 4 ಗಂಟೆ ಕೆಲಸಮಾಡಿದರೆ ಸಾಕು. ಇವತ್ತು ಮೂಲಭೂತ ಸಹಕಾರಿ ಬೇಸಾಯ ಸಂಘಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಅವನ್ನು ಹೆಚ್ಚಿಗೆ ಸ್ಥಾಪನೆ ಮಾಡಬೇಕಾಗಿದೆ. ನಾನೂ ಸಹ ಬೇರೆ ಕಡೆಗಳಲ್ಲಿ ಹೋಗಿ ಅದರ ವಿಚಾರವನ್ನು ತಿಳಿದುಕೊಂಡು ಬಂದಿದ್ದೇನೆ. ಇವತ್ತು ನನ್ನ ಅನುಭವದ ಪ್ರಕಾರ ಸಹಕಾರೀ ಬೇಸಾಯ ಸಂಘಗಳು ನಾಕಷ್ಟು ಪ್ರಮಾಣದಲ್ಲಿ ಹೆಚ್ಚಬೇಕು. ಬೇರೆಬೇರೆ ಜನಗಳನ್ನು ಬೇರೆಬೇರೆ ಕುಟುಂಬದವರನ್ನೂ ಒಂದು ಕಡೆ ಸೇರಿಸಿ ಒಂದೇ ಕಡೆ ಜಮೀನನ್ನು 'ಇಟ್ಟು

ಕೊಂಡು ಕೆಲಸ ಮಾಡುವುದಾದರೆ ಹೆಚ್ಚು ಅನುಕೂಲ ಉಂಟಾಗುತ್ತದೆ. ಈಗ ಅದರ ಬಗ್ಗೆ ಸಾಕಷ್ಟು ಕೆಲಸ ಮಾಡದೇ ಇರುವುದರಿಂದ ತಾವು ವಿಶೇಷವಾದಂಥ ಆಸಕ್ತಿಯನ್ನು ವಹಿಸಿ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಸಂಘಟನೆ ಮಾಡಿ ಸ್ವಲ್ಪಮಟ್ಟಿಗೆ ಇದನ್ನು ಕಾರ್ಯಗತಮಾಡುವುದಕ್ಕೆ ವಿಶೇಷವಾದಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಪಡಿಸುತ್ತೇನೆ. ಇವತ್ತು ಅವರಿಗೆ ಇರುವ ಭೂಮಿಯನ್ನು ಮತ್ತು ಹಿಡುವಳಿಯನ್ನು ವ್ಯವಸಾಯ ಮಾಡಿದರೆ, ಸಾಗುವಳಿ ಮಾಡಿದರೆ ಸರಿಯಾಗಿ ಸಾಗುವಳಿಯಾಗುವುದಿಲ್ಲ. ವ್ಯವಸಾಯವನ್ನೂ ಸಹ ಲಾಭದಾಯಕವಾಗಿ ಮಾಡುವುದಕ್ಕಾಗುವುದಿಲ್ಲ. ಇವತ್ತು ನಾನು ತಂದಿರುವುವ ನಿರ್ಣಯದ ಹಿನ್ನೆಲೆಯಲ್ಲಿ ಸಹಕಾರೀ ಬೇಸಾಯ ಕ್ರಮವನ್ನು ಮಾತ್ರ ಹೊಸದಾಗಿ ಚಿಂತನೆ ಮಾಡುವ ಪರಿಸ್ಥಿತಿ ಬಂದಿರುವುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿಕೊಂಡು ಅಲ್ಲಿ ಈಗಿರತಕ್ಕ ಸಹಕಾರೀ ಬೇಸಾಯ ಸಂಘಗಳು ಏನಿವೆಯೋ ಅವುಗಳ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಬೇಕು. ಅದರೆ ಸಣ್ಣಪುಟ್ಟ ಸಂಘಗಳನ್ನು ಕೈಬಿಡುವ ಹಾಗೆ ಮಾಡಿದರೆ ಒಳ್ಳೆಯದೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಅದರ ಬಗ್ಗೆ ನಾನು ಇನ್ನು ಹೆಚ್ಚಿನ ಅನುಭವವನ್ನು ಕೊಡುತ್ತೇನೆ ಒಟ್ಟಿನಲ್ಲಿ ವ್ಯವಸಾಯದಲ್ಲಿ ವಿಶೇಷವಾದ ಅನುಭವ ಇರತಕ್ಕ ಜನರನ್ನು ಇಟ್ಟು ಕೊಂಡು ಈ ಸಹಕಾರಿ ಬೇಸಾಯ ಸಂಘಗಳನ್ನು ನಡೆಸದೇ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಅಂತಹ ಜನರನ್ನು ಬೇರೆ ಕಡೆಗಳಿಗೆ ಕರೆದುಕೊಂಡು ಹೋಗಿ ಅಲ್ಲಿನ ಅನುಭವಗಳನ್ನು ಪಡೆಯಲು ತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಸಹಕಾರ ಸಚಿವರನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

[*The Chairman (Smt. Nagamma Keshava Murthy) took the Chair*]

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ನಿಲುವಳಿ ಸೂಚನೆಯ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಬಯಸುವುದಿಲ್ಲ. ಕೆಲವು ಸಂಶಯಗಳು ನನಗೆ ಇದರಲ್ಲಿ ವ್ಯಕ್ತವಾಗಿದೆ ಅದನ್ನು ಮಾನ್ಯ ಶ್ರೀ ಹೊರಕೇರಿಯವರು ನಿವಾರಣೆ ಮಾಡಬಹುದೆಂದು ತಿಳಿದುಕೊಂಡಿದ್ದೇನೆ. ನನ್ನ ಕ್ಷೇತ್ರವಾದ ಸೊರಬದಲ್ಲಿ ಕೂಡ ಬೇಸಾಯದ ಸಹಕಾರ ಸಂಘಗಳನ್ನು ಮಾಡಿಕೊಂಡಿದ್ದಾರೆ. ಅಲ್ಲಿಯ ವ್ಯವಹಾರಗಳನ್ನು ನಾವು ನೋಡುವುದಾದರೆ ನಮ್ಮ ವೈರಿಗೂ ಬೇಡವೆಂದು ಅನ್ನಿಸುತ್ತದೆ. ಅಲ್ಲಿ ಲಕ್ಷಾಂತರ ರೂಪಾಯಿಗಳನ್ನು ಲೂಟಿ ಮಾಡಿ ಹೊಡೆದು ಬಿಟ್ಟಿದ್ದಾರೆ. ರಿಕವರಿ ಆಗುವ ಹಾಗೇನೇ ಇಲ್ಲ. ಅದು ಭೂಗತವಾಗಿ ಹೋಗಿ ಬಿಟ್ಟಿದೆ. ಅದನ್ನು ಹೊರಕ್ಕೆ ತೆಗೆಯುವುದಕ್ಕೇ ಆಗುವುದಿಲ್ಲ. ಸಹಕಾರ ಬೇಸಾಯ ಸಂಘಗಳು ಎಂದರೆ ಏನು ಅನ್ನುವ ಬಗ್ಗೆ ಮಾನ್ಯ ಶ್ರೀ ಅರಿಕೇರಿಯವರು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ ಅದನ್ನು ಕೂಡ ನಾನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಸಾಧಾರಣವಾಗಿ ಇವತ್ತು ಆ ಸಹಕಾರ ಸಂಘಗಳಲ್ಲಿ ಹಣ ಏನು ದಫನ್ ಆಗಿದೆ ಅದಕ್ಕೆ ಯಾವ ಇಂಜೆಕ್ಷನ್ ಕೊಟ್ಟರೂ ಅದು ಉತ್ತಮವಾಗುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾನ್ಯ ಶ್ರೀ ಹೊರಕೇರಿಯವರು ಅರಿತಿರಬೇಕೆಂದು ತಿಳಿದುಕೊಂಡಿದ್ದೇನೆ. ಅದು ಒಂದು ಸತ್ತ ಕುದುರೆ ಇದ್ದ ಹಾಗೆ. ಅದಕ್ಕೆ ಯಾವ ಔಷಧಿಯನ್ನು ಕೊಟ್ಟರೂ ರಿಕವರಿ ಮಾಡುವುದಕ್ಕೆ ಸಾಧ್ಯವಿಲ್ಲ. ಇಂಥ ಅನೇಕ ಸೊಸೈಟಿಗಳು ಇದ್ದಾವೆ ಅವುಗಳನ್ನು ಡಿಸಾಲ್ವ್ ಮಾಡಿದರೆ ಅವರಿಂದ ಸೋರಿ ಹೋಗತಕ್ಕಂಥ ಹಣವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. It is a liability on the exchequer—ಎನ್ನುವ ಮಾತನ್ನು ಹೇಳುತ್ತೇನೆ. ಇಷ್ಟೇ ಅಲ್ಲಾ ಇವತ್ತು ಮಾನ್ಯ ಶ್ರೀ ಹೊರಕೇರಿಯವರು ರಷ್ಯಾ, ಚೈನಾ ದೇಶದಲ್ಲಿ ಏನು ಪದ್ಧತಿ ಇದೆ ಅದೇ ರೀತಿ ನಮ್ಮ ದೇಶದಲ್ಲಿಯೂ ಮಾಡುವುದಕ್ಕೆ ಹೋದರೆ ಫ್ರಾಗ್ಮೆಂಟೇಷನ್ ಆಗುತ್ತದೆ. ಆದರೆ ಇದನ್ನು ಇವತ್ತು ಪಂಚಾಯಿತಿ ಹಂತದಲ್ಲಿ ಸಹಕಾರ ಬೇಸಾಯ ಪದ್ಧತಿಯನ್ನು ಮಾಡಬೇಕು ಎನ್ನುವ ನಿಲುವು ಇದ್ದರೆ ಅದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ, ಆ ಪದ್ಧತಿಯನ್ನು ಬಿಟ್ಟು ಬೇರೆ ಮಾರ್ಗದಿಂದ ಮಾಡುವುದಕ್ಕೆ ಹೋದರೆ ನೀರನ್ನು ಹೊಳೆಗೆ ಚೆಲ್ಲಿದಂತೆ ಆಗುತ್ತದೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್ ರಂಗನಾಥ್ (ಸಹಕಾರ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷಣೀಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಸದುದ್ದೇಶದಿಂದ ಸಭೆಯ ಮುಂದೆ ನಿರ್ಣಯವನ್ನು ತಂದಿಟ್ಟಿದ್ದಾರೆ. ಅವರು ಈ ಸಹಕಾರ ಬೇಸಾಯ ಸಂಘಗಳ ಬಗ್ಗೆ ಬಹಳ ಕಳಕಳಿಯಿಂದ ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ವೈಯುಕ್ತಿಕನಾಗಿ ನಾನು ಕೂಡ ಬೇಸಾಯ ಸಹಕಾರ ಸಂಘಗಳು ಇರಬೇಕೆಂದು ಹೇಳತಕ್ಕಂಥವನೇ ಆದರೆ ಮಾನ್ಯ ಮಿತ್ರರಾದ ಶ್ರೀ ಶೀರ್ನಾಳಿ ಚಂದ್ರಶೇಖರ್‌ರವರು ಒಂದು ದೊಡ್ಡ ಮಾತನ್ನು ಆಡಿದರು "It is a liability on the exchequr" ಎಂದು ಹೇಳಿದರು. ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ನಮ್ಮಲ್ಲಿನ ಸುಮಾರು 650 ಸಹಕಾರ ಬೇಸಾಯ ಸಂಘಗಳು ಅಸ್ತಿತ್ವದಲ್ಲಿವೆ. ಅವು ರಿಜಿಸ್ಟರ್ ಆಗಿವೆ, ಆದುದರಿಂದ ಅದರಲ್ಲಿ ಸುಮಾರು 16505 ಸದಸ್ಯರಿದ್ದಾರೆ. 69 ಸಾವಿರದ 750 ಎಕರೆ ಭೂಮಿ ಈ 650 ಬೇಸಾಯ ಸಹಕಾರ ಸಂಘಗಳ ಅಧೀನದಲ್ಲಿವೆ. 46 ಸಾವಿರದ 450 ಎಕರೆ ಭೂಮಿ ಸಾಗು ಆಗುತ್ತಿದೆ. ಅದಕ್ಕಾಗಿ ನಾವು ಕೂಡ ಈ ಹಣವನ್ನು ಖರ್ಚು ಮಾಡಿದ್ದೇವೆ. ಅದಕ್ಕೆ ಶೇರು ಬಂಡವಾಳದ ರೂಪದಲ್ಲಿ, ಅಲ್ಪಾವಧಿ ಸಾಲದ ರೂಪದಲ್ಲಿ, ಮಾಧ್ಯಮಾವಧಿ ಸಾಲದ, ಸಬ್ಸಿಡಿ, ಇನ್ನು ಮುಂತಾದುವುಗಳಿಗೆ ಒಟ್ಟು 91 ಲಕ್ಷದ 43 ಸಾವಿರದ 290 ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ಮತ್ತೆ ಬೇರೆ ಸಂಸ್ಥೆಗಳಿಂದ ಅಂದರೆ ಖಾದಿ ಬೋರ್ಡ್‌ನಿಂದ ವಿಲೇಜ್ ಇಂಡಸ್ಟ್ರೀಸ್‌ನಿಂದ, ಎನ್. ಇ. ಎಸ್. ನಿಂದ ಡಿ.ಪಿ.ಎ.ಪಿ.ಯಿಂದ ಹಾಗೂ ಸಿರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಿಂದ ಅನಿಮಲ್ ಹಸ್ಬೆಂಡ್ರಿ ಡಿಪಾರ್ಟ್‌ಮೆಂಟಿನಿಂದ, ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಿಂದ ಹೀಗೆ ಬೇರೆ ಬೇರೆ ಇಲಾಖೆಯಿಂದಲೂ ಕೂಡ ಸುಮಾರು 23 ಲಕ್ಷದ 437 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಂದರೆ ಒಟ್ಟು 1 ಕೋಟಿ 19 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ಹೀಗೆ ಮಾಡಿರುವಾಗ ಅದಕ್ಕೆ ವ್ಯವಸ್ಥಿತವಾಗಿ ಹಣವನ್ನು ಕೊಡಬೇಕೆಂದು ಹೇಳಿದರು. ಇವತ್ತು ಈ ಒಂದು ಕೆಲಸ 3ನೇಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಜಾರಿಗೆ ಬಂದಿತು. ಈ ಕೆಲಸ ಆಗಿನಿಂದಲೇ ನಡೆದಿದೆ ಆದರೆ ಅದರ ಫಲ ಹೆಚ್ಚು ಪಡೆಯುವುದಿಲ್ಲ ಆಗಿಲ್ಲ, ಹೆಚ್ಚು ಫಲ ದೊರೆತಿಲ್ಲ. ಇವತ್ತು ಭೂ ಸುಧಾರಣೆ ಕಾನೂನು ಜಾರಿಗೆ ಬಂದಿರುವಂಥ ಕಾಲದಲ್ಲಿ ಸರ್ಕಾರ ಪುನರ್ ವಿಚಾರ ಮಾಡಬೇಕಾದಂಥ ಕಾಲ ಸನ್ನಿಹಿತವಾಗುತ್ತಿದೆ. ನಮ್ಮಲ್ಲಿರತಕ್ಕಂಥ ಈ ಬೇಸಾಯ ಸಹಕಾರ ಸಂಘಗಳಲ್ಲಿ ಕೆಲವು ಫಾರ್ಮಿಂಗ್ ಕೋ ಆಪರೇಟಿವ್ ಸೊಸೈಟಿಗಳು ಇವೆ ಮತ್ತು ಕೆಲವು ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಇವೆ. ಫಾರ್ಮಿಂಗ್ ಸೊಸೈಟಿ ಮತ್ತು ಬೆಟರ್ ಫಾರ್ಮಿಂಗ್ ಸೊಸೈಟಿ ಈ ರೀತಿಯ ಮೂಲಕ ಕೆಲಸ ಮಾಡುತ್ತಿದ್ದಾರೆ. ಒಟ್ಟಿಗೆ ಬೇಸಾಯ ಮಾಡಿ ಒಟ್ಟಿಗೆ ಅದರ ಖರ್ಚುವೆಚ್ಚವನ್ನು ಇಡತಕ್ಕಂಥ ರೀತಿಯಲ್ಲಿ ಕೆಲಸ ನಡೆದಿಲ್ಲ. ಯಾರು ಯಾರಿಗೆ ಭೂಮಿ ಇದೆಯೋ ಅವರವರೇ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬೇಸಾಯ ನಡೆಸುತ್ತಾ ಇರತಕ್ಕಂಥದ್ದು ವಾಸ್ತವವಾದ ವಿಷಯ. ಭೂ ಸುಧಾರಣಾ ಕಾನೂನಿನ ಅನ್ವಯ ಅದನ್ನು ಸರ್ಕಾರದವರು ಪುನರ್‌ಪರಿಶೀಲನೆ ಮಾಡತಕ್ಕಂಥ; ಪುನರ್‌ವಿಮರ್ಶೆ ಮಾಡತಕ್ಕಂಥ ಕಾಲ ಸನ್ನಿಹಿತವಾಗಿರುತ್ತದೆ.

SRI H. T. KRISHNAPPA.—That is one mode of acquiring property.

(*Mr. Deputy Speaker in the Chiar*)

ಶ್ರೀ ಕೆ. ಎಚ್. ರಂಗನಾಥ್.—ಅವರು ಸೊಸೈಟಿಗಳನ್ನು ರಿಜಿಸ್ಟರ್ ಮಾಡುವಾಗ ಜಾಯಿಂಟ್ ಫಾರ್ಮಿಂಗ್ ಸೊಸೈಟೀಸ್, ಟೆನೆಂಟ್ ಫಾರ್ಮಿಂಗ್ ಸೊಸೈಟೀಸ್, ಎಂದು ಮಾಡಿಸಿರುತ್ತಾರೆ: ಇದರ ಬಗ್ಗೆ ನಾವು ವಿಚಾರ ಮಾಡಬೇಕಾದಂಥ ಕಾಲ ಸನ್ನಿಹಿತವಾಗಿರುವುದರಿಂದ ಮಾನ್ಯ ಸದಸ್ಯರ ಅಭಿಪ್ರಾಯವೇನಿದೆ ಅದನ್ನು ಪುನಶ್ಚೇತನಗೊಳಿಸಬೇಕಾಗಿದೆ ಇವತ್ತು ಮಾನ್ಯ ಸದಸ್ಯರ ಅಭಿಪ್ರಾಯ ಕೂಡ ಇರತಕ್ಕಂಥದ್ದು 650 ಬೇಸಾಯ ಸಹಕಾರ ಸಂಘಗಳನ್ನು ವ್ಯವಸ್ಥಿತಗೊಳಿಸಬೇಕು ಎನ್ನುವ ಅರ್ಥದಲ್ಲಿ ಹೇಳಿದ್ದಾರೆ ಅದನ್ನು ಕೂಡ ವಿಚಾರ ಮಾಡಬೇಕು ಎನ್ನುವ ಮಟ್ಟದಲ್ಲಿ ಹೇಳಿದ್ದಾರೆ. ಆದರೆ ಇವತ್ತು ಸರ್ಕಾರಕ್ಕೆ ಬಂದಿರತಕ್ಕಂಥ ತೊಂದರೆ ಎಂದರೆ ಭೂ ಶಾಸನ ಮಟ್ಟದಲ್ಲಿ ಈ ಒಂದು ಕಾನೂನಿನ ಅಡಿಯಲ್ಲಿ ನಾವು ಹೇಗೆ ಮಾಡಬೇಕು ಎನ್ನುವಂಥ ವಿಚಾರವಿರುವುದರಿಂದ ಯಾವುದೇ ರೀತಿಯಲ್ಲಿ ತೀರ್ಮಾನವನ್ನು ಪುನಶ್ಚೇತನ ಮಾಡುವ ದೃಷ್ಟಿ

ಯಿಂದ ಆ ದಾರಿಯಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಆಗುತ್ತಿಲ್ಲ. ಆ ದೃಷ್ಟಿಯಿಂದ ಇವತ್ತು ನಾವು ಇಲ್ಲಿ ಹೇಗೆ ಮಾಡಬೇಕು, ಏನು ಮಾಡಬೇಕೆಂದು ಹೇಳಿ ಕೂಡ ವಿಚಾರ ಮಾಡುತ್ತಿದ್ದೇವೆ. ಆದುದರಿಂದ ಮಾನ್ಯ ಸದಸ್ಯರ ಅಭಿಪ್ರಾಯವೇನಿದೆ. ಆ ಅಭಿಪ್ರಾಯಕ್ಕೆ ವಿರುದ್ಧವಾದಂಥ ಅಭಿಪ್ರಾಯವೇನೂ ಇಲ್ಲ. ಆ ರೆಜಲ್ಯೂಷನ್ ಕೂಡ ಬಹಳ ಸಾಧುವಾಗಿರತಕ್ಕಂಥದ್ದು. ಆ ನಿರ್ಣಯವನ್ನು ಕಾರ್ಯರೂಪಕ್ಕೆ ಕೊಡುವುದಕ್ಕೆ ನಾವು ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳಲು ಆಗದೇ ಇರುವುದರಿಂದ ಮಾನ್ಯ ಸದಸ್ಯರು ಅವರ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತಾ, ಇವತ್ತು ನಾವು ಸಹಕಾರ ಬೇಸಾಯ ಸಂಘಗಳಿಗೆ ಸಹಾಯ ಮಾಡುವುದಕ್ಕೆ ಯಾವುದೇ ರೀತಿಯಲ್ಲಿ ಹಿಂದುಮುಂದು ನೋಡುವುದಿಲ್ಲ. ಅವರಿಗೆ ಏನು ಸಹಾಯ ಮಾಡಬೇಕೋ ಅದನ್ನು ಮಾಡುತ್ತೇವೆ. ಆದುದರಿಂದ ಮಾನ್ಯ ಸದಸ್ಯರು ಏನು ನಿರ್ಣಯವನ್ನು ತಂದಿದ್ದಾರೆ ಅದೇ ರೀತಿ ನಾವು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವಾದುದರ ಕಾರಣ, ಅವರ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಚಿವರು ಉತ್ತರ ಹೇಳುತ್ತಾ ಒಂದು ಮಾತನ್ನು ಹೇಳಿದರು. ಇವತ್ತು ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಆಗಲೀ ಅಥವಾ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳು ಆಗಲಿ ಅವರು ಹೇಳಿದ ಅರ್ಥದಲ್ಲಿ ಅವರೆಲ್ಲಾ ಒಟ್ಟಿಗೆ ಸಮೂಹಿಕವಾಗಿ ಸಾಗುವಳಿ ಮಾಡುತ್ತಿಲ್ಲ. ಒಟ್ಟಿಗೆ ಖರ್ಚುವೆಚ್ಚದ ಲೆಕ್ಕವನ್ನು ಇಟ್ಟಿಲ್ಲ, ಅವರವರ ಜಮೀನನ್ನು ಅವರವರೇ ಸಾಗುವಳಿ ಮಾಡಿಕೊಂಡಿದ್ದಾರೆ. ಅವರವರ ಜಮೀನಿಗೆ ಅವರವರೇ ಗೊಬ್ಬರ, ಬೀಜ ಹಾಕಿಕೊಂಡಿದ್ದಾರೆ ಎನ್ನುವುದು ಗೊತ್ತಾಗುತ್ತಿದೆ. ಹಾಗಾದರೆ ಇದು ಬೇಸಿಕ್ ಪ್ರಿನ್ಸಿಪಲ್‌ಗೆ ವಿರುದ ವಾಗಲಿಲ್ಲವೇ ;

ಶ್ರೀ ಕೆ. ಎಚ್. ರಂಗನಾಥ್.—ನಾವು ಏನು ಒಂದು ಬಯಸುತ್ತೇವೆ ಅದು ಹಾಗೆಯೇ ಕಾರ್ಯಗತವಾಗುತ್ತದೆಯೇ ಎನ್ನುವುದನ್ನು ನಾವು ಕಾದು ನೋಡಬೇಕಾಗಿದೆ. ಸರ್ಕಾರ 3 ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಬೇಸಾಯ ಸಂಘಗಳನ್ನು ಮಾಡುವಾಗ, ಸಾಮೂಹಿಕ ಬೇಸಾಯ ಪದ್ಧತಿಯನ್ನು ಮಾಡಬೇಕು ಎನ್ನತಕ್ಕಂಥ ತತ್ವವನ್ನು ಅಳವಡಿಸಿಕೊಂಡು ಅದನ್ನು ಅಸ್ತಿತ್ವಕ್ಕೆ ತಂದಿದ್ದಾರೆ, ಅದನ್ನು ಕಾರ್ಯಗತ ಮಾಡುವಾಗ ಯಾವ ರೀತಿಯಲ್ಲಿ ಅದು ಕಾರ್ಯಗತವಾಗುತ್ತಿದೆಂಬುದನ್ನು ನೋಡಬೇಕಾಗಿದೆ, ಇದರಲ್ಲಿ ತಮ್ಮ ಮುಂದೆ ಯಾ ವಿಷಯವನ್ನು ಮುಚ್ಚಿಡತಕ್ಕಂಥದ್ದು ಇಲ್ಲ. ಮರೆ ಮಾಚಿ ಹೇಳತಕ್ಕಂಥದ್ದು ಇಲ್ಲ. ಆದುದರಿಂದ ಈ ಎಲ್ಲ ಹಿನ್ನೆಲೆಯಲ್ಲಿ ಮತ್ತು ಭೂ ಸುಧಾರಣಾ ಕಾನೂನು ಇವತ್ತು ಜಾರಿಗೆ ಬಂದಿರುವುದರಿಂದ ಅದರ ಹಿನ್ನೆಲೆಯಲ್ಲೂ ಕೂಡ ಇವತ್ತು ಇದರ ಬಗ್ಗೆ ನಾವು ಪುನರ್‌ವಿಚಾರ ಮಾಡಬೇಕಾದಂಥ ಕಾಲ ಬಂದಿರುವುದರಿಂದ ಮಾನ್ಯ ಸದಸ್ಯರ ಅಭಿಪ್ರಾಯ ಸಾಧುವಾಗಿದ್ದರೂ ಕೂಡ ಅವರ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

SRI KAGODU THIMMAPPA.—You must take at least the spirit of the resolution.

SRI K. H. RANGANATH.—Time and again I am telling that most of these societies area not working in good condition.

ಶ್ರೀ ಬಿ ಎಂ. ಹೊರಕೇರಿ.—ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಚಿವರು ಸೂಕ್ತವಾದ ವಿಚಾರ ಹೇಳಿದರು. ನನ್ನ ವಿಚಾರ ಇದ್ದುದು ಇಷ್ಟೆ, ಇಂತಹ ಸಹಕಾರ ಸಂಘಗಳ ವರ್ಕಿಂಗ್ ಏನು ಇದೆ ಇದರ ಬೋನಾಫೈಡ್ಸನ್ನು ಪರಿಶೀಲಿಸಬೇಕೆಂದು ಈ ನಿರ್ಣಯವನ್ನು ಮಂಡಿಸಿದ್ದೆ. ಈಗ ನಾನು ತಮ್ಮ ಮುಂದೆ ಮಂಡಿಸಿದ ಈ ಖಾಸಗಿ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

MR. DEPUTY SPEAKER.—It is the pleasure of the House that the Resolution be withdrawn ?

HON. MEMBERS.—Yes.

The resolution was, by leave withdrawn.

5-00 P. M.

STATEMENT BY THE CHIEF MINISTER

re : incrsing (Prices of Foodgrains in the state)

(Open market purchase type)

MR, DEPUTY SPEAKER.—Now the Chief Minister may make the statement.

SRI D. DEVARAJ URS (Chief Minister) — Sir I thought that I should make a statement regarding the prices of food-grains which have caused uncertain anxieties amongst the farmers all over the State because of the fact that last year's good seasonal conditions have resulted in production being on higher scale. I must say with certain degree of gratification that the production has reached the target level which is beyond our projected level. Therefore, this in turn we call it as a problem of plenty has arisen and the paddy prices have also fallen. In addition to that even the coarse grains like hybrid jowar, maize and ragi have also fallen. They have fallen to a level below the support price or levy price. Therefore the Government have immediately stepped into the situation and we have offered to buy the coarse grain at a rate not lower than the levy rate and also we have been buying. But nevertheless there are some doubts raised apprehensions have been expressed and complaints have been received that the Food Corporation is not buying in time or somebody circulate the remour that the Government has not enough money to buy all food-grains and also we don't have the necessary godown facilities to keep this grain that are going to be bought. Sometimes, may be the fears to be genuine. But many a time, these are all the fears borne out by certain remours spread by the class of people who are the traditional buyers of these grains. They would like to see that the farmers give to them but not go to the Government or the Food Corporation. Therefore, I thought it proper to make a statement as to the policy and how the policy is being worked out in the State.

I rise to make a statement on the policy of Government regarding open market purchases of grain.